ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಹಂಚಿದಷ್ಟೂ ಹೆಚ್ಚಾಗುತ್ತಾ ಹೋಗುವ ವಸ್ತು ಯಾವುದು?*



ನೆಗಡಿ, ವೈರಲ್ ಫೀವರ್.

ಹೆಚ್.ವಿ. ಶ್ರೀಧರ್, ಬೆಂಗಳೂರು
*ಅಣ್ಣ-ತಮ್ಮಂದಿರು ಚೆನ್ನಾಗಿಯೇ ಇರುತ್ತಾರೆ. ಆದರೆ ಓರಗಿತ್ತಿಯರು ಬಂದಮೇಲೆ ವಾರ್ ಶುರುವಾಗುತ್ತದೆ ಅಲ್ಲವೆ?*
ಕಿವಿ ಹಿತ್ತಾಳೆಯಾಗದೆ ಚರ್ಮದ್ದೇ ಆಗಿದ್ದರೆ ಹಾಗೇನೂ ಆಗುವುದಿಲ್ಲವಂತೆ.

ಮಾಧುರಿ ಮಾ. ನಾಯಕ, ಬೆಳಗಾವಿ
*ಕನ್ನಡದ ಬಗ್ಗೆ ಅಪಾರ ಅಭಿಮಾನವನ್ನು ಇಟ್ಟುಕೊಂಡರೂ ಇಂಗ್ಲಿಷ್ ಬಳಕೆ ಏಕಾಗುತ್ತಿದೆ?*
ಅಭಿಮಾನ ಮಾತ್ರ ಇದ್ದು ಅಧ್ಯಯನ ಇಲ್ಲದಿರುವುದರಿಂದ.

ಕೆ.ಜಿ. ಶೇಖರಪ್ಪ, ಅರಸೀಕೆರೆ
*ಆಸೆಯನ್ನು ನಿಯಂತ್ರಿಸಲು ಸುಲಭ ಉಪಾಯ ತಿಳಿಸಿ ಸಾರ್...?*
ಹೆಚ್ಚು ಸುದ್ದಿ, ಕಡಿಮೆ ಜಾಹೀರಾತನ್ನು ನೋಡಿ.

ಎಂ.ಎನ್ ಸೋಮಶೇಖರ್, ಮೈಸೂರು
*ಹರಾಜಿನಲ್ಲಿ ಟಿಪ್ಪುವಿನ ಕತ್ತಿ ಕೊಂಡವರು ಸರ್ವನಾಶ ಆದುದು ಏಕೆ?*



ನಿಜಪಥವಂ ತ್ಯಜಿಸಿ ಸುಳ್ ತಾನ್ ಆದುದರಿಂದ.

ಯಶೋದಾ ಶೆಟ್ಟಿ, ಅಜೆಕಾರು
*ಸ್ತ್ರೀವೇಷ ಧರಿಸಿ ಗಂಡಸರನ್ನು ಆಕರ್ಷಿಸುವ ಮಂಗಳಮುಖಿಯರು ಪುರುಷ ವೇಷ ಧರಿಸಿ ಹೆಣ್ಣನ್ನೇಕೆ ಆಕರ್ಷಿಸುವುದಿಲ್ಲ?*
ಹೆಣ್ಣು ನಡತೆಗೆ ಆಕರ್ಷಿತಳಾಗುವಳು, ಗಂಡು ಆಕೃತಿಗೇ ಆಕರ್ಷಿತನಾಗುವವನು ಎಂದು ಅವರಿಗೆ ಗೊತ್ತು.

ಎಂ.ಕೆ. ಗಿರೀಶ್, ಬಸವಾಪಟ್ಟಣ
*ಸ್ತ್ರೀಯರ ಯಾವ ಗುಣ ಗಂಡಸರಿಗಿಷ್ಟ? ಗಂಡಸರ ಯಾವ ಗುಣ ಸ್ತ್ರೀಯರಿಗಿಷ್ಟ?*
ಬಲೆಗೆ ಬೀಳುವ ಗುಣ; ಬಲೆಗೆ ಬಿದ್ದಿದ್ದಾಳೆಂದು ನಂಬುವ ಬಕರಾ ಗುಣ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಜೀವನವು ಒಂದು ನಾಟಕರಂಗ ಎನ್ನುತ್ತಾರೆ. ಸಿನಿಮಾರಂಗ ಎಂದೇಕೆ ಹೇಳುವುದಿಲ್ಲ?*
ಸಿನಿಮಾದಲ್ಲಿ ಎಲ್ಲವೂ ಬೃಹದಾಕಾರ; ಕಿರುತೆರೆಯಲ್ಲಿ ಎಲ್ಲವೂ ಕಿರಿದು; ನೈಜ ಅಳತೆ ತೋರುವುದು ನಾಟಕವೊಂದೇ.

ಎಂ.ಎ. ಕುಮಾರ್, ಬೆಂಗಳೂರು
*ಧುಮ್ಮಿಕ್ಕುವ ಜಲಪಾತ ಕೆಳಗೆ ಇಳಿದಾಗ ಪ್ರಶಾಂತವಾಗಿ ಹರಿಯುತ್ತದೆ. ಧುಮುಧುಮು ಎನ್ನುವ ಮಡದಿ?*
ಪತಿ ಇವಳು ಹೇಳಿದಂತೆ ಕೇಳುವ ಪ್ರಪಾತಕ್ಕೆ ಇಳಿದಾಗ ಪ್ರಶಾಂತವಾಗಿ ಸರಿಯುತ್ತಾಳೆ.

ಕೆ.ಎಂ. ವಿಭೂತಿ, ಹರಿಹರ
*ಹಲವು ಆಸ್ಪತ್ರೆಗಳಲ್ಲಿ ನಮ್ಮ ಅಂಗೈಯಲ್ಲಿ ನಿಮ್ಮ ಆರೋಗ್ಯ ಎಂದು ಜಾಹೀರಾತು ಹಾಕಿರುವುದರ ಅರ್ಥವೇನು?*
'ನಾವು ಯಾವಾಗ ಬೇಕಾದರೂ ಕೈ ಚೆಲ್ಲಬಹುದು' ಎಂದು.

ವಿ. ಹಮೀದ್, ವಿಟ್ಲ
*ಗಂಡಿಗಿಂತ ಹೆಣ್ಣೇ ಸ್ಟ್ರಾಂಗ್ ಎನ್ನುವುದಕ್ಕೆ ಒಂದು ಉತ್ತಮ ಉದಾಹರಣೆ?*
ಪನ್ನೀರ್ ಸೆಲ್ವಂ – ಜಯಲಲಿತಾ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ರಾಮ- ಲಕ್ಷ್ಮಣರಂತಹ ಅಣ್ಣತಮ್ಮಂದಿರು ಈಗಲೂ ಇದ್ದಾರೆಯೆ?*
ಮೊದಲ ಹಂತದಲ್ಲಿದ್ದಾರೆ. ಹುಟ್ಟಾ ಹುಟ್ಟಾ ರಾಮ– ಲಕ್ಷ್ಮಣ; ಬೆಳೀತಾ ಬೆಳೀತಾ ವಾಲಿ– ಸುಗ್ರೀವ.

ಬಿದರಹಳ್ಳಿ ವಿಜಯ, ಹಿರೇಹಡಗಲಿ
*ಆಟ-ಪಾಠಗಳಿಗೆ ಕೋಚಿಂಗ್ ಕ್ಲಾಸುಗಳಿರುವಂತೆ ದುಷ್ಟಟಗಳಿಗೆ ಕೋಚಿಂಗ್ ಕ್ಲಾಸುಗಳೇಕಿಲ್ಲ?*
ಇವೆ; ಯಾವುದೇ ಪುಢಾರಿಯ ಚೇಲಾ ಆಗಿ; ದುಷ್ಟಟಗಳನ್ನು ವೈಯಕ್ತಿವಾಗಿ, ಮುತುವರ್ಜಿಯಿಂದ ಕಲಿಸುತ್ತಾನೆ.

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮಾನವನ ಸಾವಿನ ಬಗ್ಗೆ ಯಾಕೆ ಈವರೆಗೂ ಯಾರೂ ಸಂಶೋಧನೆ ನಡೆಸಿಲ್ಲ?*
ನಡೆಸಿದ್ದಾರೆ. ಅದಕ್ಕೊಂದು ಹೆಸರೂ ಇದೆ – ಪೋಸ್ಟ್ ಮಾರ್ಟಮ್.

ಗಾಯತ್ರಿ, ಬೆಂಗಳೂರು
*ಮಗ ದಾರಿ ತಪ್ಪಿದರೂ ಪರವಾಯಿಲ್ಲ, ಭ್ರಷ್ಟಾಚಾರವನ್ನು ಬಿಡಲಾರೆ ಎನ್ನುವವರಿಗೆ....?*
ಕರೆದು ಮಂತ್ರಿಗಿರಿಗೆ ಟಿಕೆಟ್ಟೀವರೋ ಎಂದ ಮರ್ಮಜ್ಞ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮಂತ್ರಿಗಳಿಗೆ ಸರ್ಕಾರ ಸಂಚಾರಕ್ಕೆ ಪಲ್ಲಕ್ಕಿಯಲ್ಲಿ ಹೋಗಬೇಕೆಂದು ಕಾನೂನು ಜಾರಿ ಮಾಡಿದರೆ?*
ಕೆಲವು ಮಂತ್ರಿಗಳಿಗಂತೂ ಸರಿಹೊಂದುತ್ತದೆ; ಜೀವವಿಲ್ಲದ್ದನ್ನು ಹೊತ್ತೊಯ್ಯುವುದು ನಮ್ಮ ಸಂಪ್ರದಾಯ.

ಎಸ್. ರಾಮಕೃಷ್ಣಾರೆಡ್ಡಿ, ಯಲಹಂಕ
*ನಮ್ಮ ದೇಶದಲ್ಲಿ ಸಮಾನತೆ ಎಲ್ಲಿದೆ?*



ಬಾರ್‌ಗಳಲ್ಲಿ; ಕುಡಿದು ಟೈಟ್ ಆದ ನಂತರ ಎಲ್ಲರದೂ ಒಂದೇ ಮಟ್ಟ : ನೆಲಮಟ್ಟ!

ಅಮರಯ್ಯಾ ಪತ್ರಿಮಠ, ಶೋರಾಪೂರ
*ಹಂಚಿಕೊಂಡು ತಿನ್ನುವುದಕ್ಕೂ, ಹರಿದುಕೊಂಡು ತಿನ್ನುವುದಕ್ಕೂ ವ್ಯತ್ಯಾಸವೇನು?*
ಹಂಚಿಕೊಂಡು ತಿನ್ನುವವನು ನರ; ಹರಿದುಕೊಂಡು ತಿನ್ನುವವನು ನರಿ.

ಬಂಟ್ವಾಳ ಸೂರ್ಯನಾರಾಯಣರಾವ್, ಮಂಡ್ಯ
*ಯತ್ರ ನಾರ್ಯಸ್ತು ಪೂಜ್ಯಂತೆ ಒಂದೆಡೆಯಾದರೆ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಇನ್ನೊಂದೆಡೆ. ಈ ದ್ವಂದ್ವಕ್ಕೆ ತಮ್ಮ ಉತ್ತರ?*
ಎಲ್ಲ ಖ್ಯಾತನಾಮರಿಗೂ ಅನ್ವಯಿಸುವ ಉತ್ತರವೇ – ಪೂಜ್ಯತೆ ಹೆಚ್ಚಿದಂತೆ ಸ್ವಾತಂತ್ರ್ಯ ಕಡಿಮೆಯಾಗುತ್ತದೆ.

■ ರಾಮ್